**O. S. No:571/2022**
**PW:1**

(ಇಂದು ದಿನಾಂಕಃ **04-02-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದಃ**

1 ನೇ ಪ್ರತಿವಾದಿಯ ಗಂಡನ ಹೆಸರು ದೇವಪ್ಪ. ನನ್ನ ಗಂಡನ ಊರು ಹಾವೇರಿ ಜಿಲ್ಲೆಯ ಕಲ್ಲಿಹಾಳ ಗ್ರಾಮ. ನನ್ನ ಗಂಡನ ಹೆಸರು ರಾಮಪ್ಪ. 1 ನೇ ಪ್ರತಿವಾದಿ ನನ್ನ ಗಂಡ ಹಾಗೂ ಇನ್ನಿತರರ ವಿರುದ್ಧ ಹಾವೇರಿ ನ್ಯಾಯಾಲಯದಲ್ಲಿ ಮೂಲ ದಾವಾ ಸಂಃ 56/2023 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ದಿನಾಂಕಃ 21-06-2025 ರಂದು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಗಂಡ ಹಾಗೂ ಮಕ್ಕಳೊಂದಿಗೆ ಸಾಸ್ವಿಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ನನ್ನ ಗಂಡ ನನ್ನನ್ನು ಕೇಳಿ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ಸದರಿಯವರು ಹಾವೇರಿ ನ್ಯಾಯಾಲಯದಲ್ಲಿ ಹಾಜರಾಗಲು ಹೋದಾಗ ನನಗೆ ತಿಳಿಸುತ್ತೀರಲಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡನ ಊರು ಹಾವೇರಿಯಾದ ಕಾರಣ ಅವರು ಹೋಗುತ್ತಿದ್ದರು ಎಂದು ನುಡಿದಿರುತ್ತಾರೆ.

2. ನಾವು ಸಾಸ್ವಿಹಳ್ಳಿ ಗ್ರಾಮದಲ್ಲಿ ವಾಸವಿದ್ದು ಅಂದಾಜು 45 ವರ್ಷಗಳಾಗಿರುತ್ತವೆ. ನಾನು ದೇವಪ್ಪ ಅಡಿವೆಪ್ಪ ನಾಯ್ಕಾರ ಹಾಗೂ ಶಿವಾಜಿರಾವ್ ಅಣ್ಣಾರಾವ್ ಮೋಕಾಶಿರವರ ವಿರುದ್ಧ ಸಿವಿಲ್ ನ್ಯಾಯಾಲಯ, ನವಲಗುಂದ ರವರಲ್ಲಿ ಮೂಲ ದಾವಾ ಸಂಃ 104/1983 ನ್ನು ಸಲ್ಲಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಒಬ್ಬ ಎಸ್ ಪಿ ಹಿರೇಮಠ ವಕೀಲರನ್ನು ನನ್ನ ಪರವಾಗಿ ನೇಮಿಸಿಕೊಂಡಿದ್ದೇನು ಎಂದರೆ ನನಗೆ ಗೊತ್ತಿಲ್ಲ. ದೇವಪ್ಪನ ಹೆಂಡತಿಯ ಹೆಸರ ಗಂಗವ್ವ. ಸದರಿಯವರಿಗೆ 2 ನೇ ಪ್ರತಿವಾದಿ ಮಗಳಾಗಿರುತ್ತಾಳೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿ ನಾನು ಮೂಲ ದಾವಾ ಸಂಃ 104/1983 ನ್ನು ದಾಖಲಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ದಿನಾಂಕಃ 29-08-1984 ರಂದು ರಾಜೀ ಮಾಡಲಾಗಿರುತ್ತದೆ ಎಂದರೆ ನನಗೆ ಹಿಂದಿನ ವಿಷಯ ನೆನಪಿಲ್ಲ ಎಂದು ನುಡಿದಿರುತ್ತಾರೆ. ಸದರಿ ಹಿರಿಯರ ಸಮಕ್ಷಮ ರಾಜೀ ಪತ್ರ ಬರೆಯಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಒಬ್ಬ ಗುಡ್ಡಪ್ಪ ಮೈಲಾರಪ್ಪ ಗುಂಡೆನಳ್ಳಿ ರವರು ನನ್ನ ಮಾವ. ಅದೇ ರೀತಿ ಒಬ್ಬ ಶಿವಪುತ್ರಪ್ಪ ಪರಸಪ್ಪ ನಾಯ್ಕಾರ ರವರ ಪರಿಚಯವಿದ್ದು, ಸದರಿಯವರು ಈಗ ಮೃತಪಟ್ಟಿರುತ್ತಾರೆ. ಅದೇ ರೀತಿ ಗೋವಿಂದಪ್ಪ ಹಿರೇಗೌಡ್ರ, ವಿ ಪಿ ನಾಯ್ಕಾರ ರವರ ಪರಿಚಯವಿದ್ದು, ಸದರಿಯವರು ಈಗ ಮೃತಪಟ್ಟಿರುತ್ತಾರೆ. ನನ್ನ ಮಾವ ಗುಡ್ಡಪ್ಪ ಸಹ ಈಗ ಮೃತಪಟ್ಟಿರುತ್ತಾರೆ. ಸದರಿ ಸಮಯಕ್ಕೆ ತಯಾರಿಸಲಾದ ರಾಜೀ ಪತ್ರಕ್ಕೆ ಸದರಿಯವರು ಹಾಗೂ ನಾನು ಸಹಿ ಮಾಡಿರುತ್ತೇವೆ ಎಂದರೆ ನಾವು ಚಿಕ್ಕವರಿದ್ದು, ನಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

3. ನಾನು 1 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಂತರ ಸದರಿ ದಾವೆ ರಾಜೀಯಾದ ಕಾರಣ ನಾನು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಮತ್ತು ಆ ಕಾರಣಕ್ಕೆ ದಾವೆ ವಜಾ

ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಜೀ ಪತ್ರದಲ್ಲಿ ನನಗೆ 2 ಎಕರೆ 6 ಗುಂಟೆ ಜಮೀನು ಹಾಗೂ ವಿ ಪಿ ಸಿ ಸಂಃ 78 ರಲ್ಲಿ ಅರ್ಧ ಭಾಗ ಹಾಗೂ ಪ್ರತಿವಾದಿಯರಿಗೆ 3 ಎಕರೆ 6 ಗುಂಟೆ ಜಮೀನು ಮತ್ತು ವಿ ಪಿ ಸಿ ಸಂಃ 78 ರಲ್ಲಿ ದಕ್ಷಿಣ ಭಾಗದ ಅರ್ಧ ಭಾಗ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ಜಮೀನು ಸರ್ವೆ ನಂಃ 181/1 ಹಾಗೂ 181/2 ಮೂಲತಃ ಒಬ್ಬ ದ್ಯಾವಪ್ಪ ಅಡಿವೆಪ್ಪ ನಾಯ್ಕಾರ ರವರ ಹೆಸರಿನಲ್ಲಿದ್ದವು ಎಂದರೆ ಸರಿ. ಸದರಿ ದ್ಯಾವಪ್ಪ ಎಂದರೆ 1 ನೇ ಪ್ರತಿವಾದಿಯ ಗಂಡ ಹಾಗೂ 2 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಸದರಿ ದ್ಯಾವಪ್ಪ 20-03-1984 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರು ಮೃತಪಟ್ಟ ನಂತರ ಸದರಿ ಆಸ್ತಿಗಳು ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿ 1984 ರಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಸದರಿಯವರ ಹೆಸರಿನ ಜೊತೆ ನನ್ನ ಹೆಸರನ್ನು ಜಂಟಿಯಾಗಿ ಸೇರಿಸುವಂತೆ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ಕೊಟ್ಟ ಅರ್ಜಿ ದಿನಾಂಕಃ 21-12-1983 ರಂದು ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜೀ ಪ್ರಕಾರ ನಮ್ಮಗಳ ಪಾಲಿಗೆ ಬಂದ ಜಮೀನಿನಲ್ಲಿ ನಾವುಗಳು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ನಮ್ಮಗಳ ಪಾಲಿಗೆ ಬಂದ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಬೇರೆ ಕಡೆಗೆ ವಾಸವಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಕಳೆದ 20 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದೇನೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ ಹಾಗೂ ನಾನು ಎರಡೂ ಮನೆಯಲ್ಲಿ ವಾಸವಿರುತ್ತೇನೆ. ನಾನು ಖರೀದಿಸಿದ ಮನೆಯಲ್ಲಿ ವಾಸವಿದ್ದೇನೆ. ಸದರಿ ನಿವೇಶನ ಸರ್ಕಾರದಿಂದ ನನಗೆ ಮಂಜೂರಾದ ನಿವೇಶನವಾಗಿರುತ್ತದೆ. ಸದರಿ ಅಂಶವನ್ನು ನನ್ನ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ.

5. ಹಿರಿಯರ ಸಮಕ್ಷಮವಾದ ರಾಜೀಯ ಪ್ರಕಾರ ನಮ್ಮಗಳ ಪಾಲಿಗೆ ಬಂದ ಆಸ್ತಿಗಳಲ್ಲಿ ನಾವು ಹಾಗೂ ಪ್ರತಿವಾದಿಯರ ಪಾಲಿಗೆ ಬಂದ ಆಸ್ತಿಯಲ್ಲಿ ಪ್ರತಿವಾದಿಯರು ಇದ್ದೇವೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**